ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು**

ಸಂಖ್ಯೆ: ಸಿ.ಎಸ್1/ ಗ.ಶಾ/ಎಸ್.ಎಸ್.ಎಲ್.ಸಿ/ಆ.ಅಂ.ಅಪ್/03/2021-22 **ದಿನಾಂಕ: 20-09-2021**

## - ಸುತ್ತೋಲೆ -

**ವಿಷಯ** :. ಸೆಪ್ಟೆಂಬರ್ 2021 ರ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ನೋಂದಾಯಿಸಿರುವ CCERF ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದು ಮಾಡುವ ಬಗ್ಗೆ.

**ಉಲ್ಲೇಖ:** 1) ಡಿ.ಎಸ್.ಇ.ಆರ್.ಟಿ ಯ ಸುತ್ತೋಲೆ ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇವಿಜಿ/ವಿ.ಪ.ಕು/72/ 2018-19 ದಿ: 18-01-2021

2) ಮಂಡಳಿಯ ಗಣಕ ಶಾಖೆಯ ಸುತ್ತೋಲೆ ಸಂಖ್ಯೆ: ಸಿ.ಎಸ್1/ಗ.ಶಾ/ಎಸ್.ಎಸ್.ಎಲ್.ಸಿ/ ಆ.ಅಂ.ಅಪ್/02/2021-22 ದಿ: 19/08/2021

********

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಜುಲೈ-2021ರ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಗೆ ನೋಂದಾಯಿಸದ, ಸೆಪ್ಟೆಂಬರ್ 2021ರ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ನೋಂದಾಯಿಸಿರುವ CCERF ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದು ಮಾಡಲು ದಿನಾಂಕ: 21-09-2021 ರಿಂದ 24-09-2021 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖ 1 ರಂತೆ 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19ರ ಹಿನ್ನಲೆಯಲ್ಲಿ 10ನೇ ತರಗತಿಗೆ ಆಂತರಿಕ ಪರೀಕ್ಷೆಗಳು ಮತ್ತು ಮೌಲ್ಯಮಾಪನ ಕಾರ್ಯವನ್ನು ಕೈಗೊಂಡು ಸೂಕ್ತ ದಾಖಲೆಗಳನ್ನು ನಿರ್ವಹಿಸಲು ಸೂಚಿಸಲಾಗಿದೆ. ಆ ಸುತ್ತೋಲೆಯಲ್ಲಿ ವಿವರಿಸಿರುವಂತೆ ಆಂತರಿಕ ಪರೀಕ್ಷೆಗಳು ಮತ್ತು ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸಿ ಸಿದ್ಧಪಡಿಸಿರುವ ದಾಖಲೆಗಳ ಅನುಸಾರ ಆಂತರಿಕ ಅಂಕಗಳನ್ನು ನಮೂದಿಸಲು ಸೂಚಿಸಿದೆ.

ಜುಲೈ 2021ರ ಮುಖ್ಯ ಪರೀಕ್ಷೆಗೆ ನೋಂದಾಯಿಸಿದ್ದು, ಪರೀಕ್ಷೆಗೆ ಗೈರುಹಾಜರಾಗಿರುವ CCERF ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಈಗಾಗಲೇ ಮುಖ್ಯ ಶಿಕ್ಷಕರು ಆನ್‌ಲೈನ್‌ನಲ್ಲಿ ನಮೂದು ಮಾಡಿರುವುದರಿಂದ, ಅಂತಹ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದು ಮಾಡಲು ಅವಕಾಶ ಕಲ್ಪಿಸಿರುವುದಿಲ್ಲ.

ಸೆಪ್ಟೆಂಬರ್ 2021 ರ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ CCERF ವಿದ್ಯಾರ್ಥಿಗಳನ್ನು ನೋಂದಾಯಿಸಿರುವ ಶಾಲೆಗಳ ಮುಖ್ಯಸ್ಥರು ಮಂಡಳಿಯ ಜಾಲತಾಣದಲ್ಲಿ ಲಭ್ಯವಿರುವ ತಂತ್ರಾಂಶವನ್ನು ಬಳಸಿ ಅಂತಹ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದು ಮಾಡಲು ಸೂಚಿಸಿದೆ.

1. ಮಂಡಳಿಯ ಜಾಲತಾಣ https://sslc.karnataka.gov.in/ ನ ಶಾಲಾ ಲಾಗಿನ್‌ನಲ್ಲಿ ತಂತ್ರಾಂಶ ಲಭ್ಯವಿದೆ.
2. ಈಗಾಗಲೇ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿರುವ ತಂತ್ರಾಂಶದ ಯೂಸರ್‌ನೇಮ್ ಹಾಗೂ ಪಾಸ್‌ವರ್ಡ್‌ನ್ನು ಬಳಸಿ ಆಂತರಿಕ ಅಂಕಗಳನ್ನು ಅಪ್‌ಡೇಟ್ ಮಾಡಲು ಬಳಸುವುದು.
3. ಲಾಗ್‌ಇನ್ ಆದ ನಂತರ ಮೊದಲು Internal Marks Entry ಮೇಲೆ ಕ್ಲಿಕ್ ಮಾಡಬೇಕು. ತೆರೆಯಲಾಗುವ ವೆಬ್‌ಪೇಜ್‌ನಲ್ಲಿ ವಿದ್ಯಾರ್ಥಿಯ ಎಸ್.ಎ.ಟಿ.ಎಸ್ (SATS NUMBER) ಸಂಖ್ಯೆಯನ್ನು ನಮೂದಿಸಿ View ಬಟನ್ ಮೇಲೆ ಕ್ಲಿಕ್ಕಿಸುವುದು. ಆಗ ವಿದ್ಯಾರ್ಥಿಯ ಎಲ್ಲಾ ಮಾಹಿತಿಗಳು Display ಆಗುತ್ತದೆ. ಈ ಎಲ್ಲಾ ಮಾಹಿತಿಗಳು ಆಂತರಿಕ ಅಂಕಗಳನ್ನು ನಮೂದು ಮಾಡುತ್ತಿರುವ ನಿರ್ದಿಷ್ಟ ವಿದ್ಯಾರ್ಥಿಯದೇ ಎಂದು ಖಚಿತಪಡಿಸಿಕೊಂಡು ಆಂತರಿಕ ಅಂಕಗಳನ್ನು ನಮೂದಿಸುವುದು.

4. ವಿದ್ಯಾರ್ಥಿಯು ತೆಗೆದುಕೊಂಡಿರುವ ಭಾಷೆ ಮತ್ತು ವಿಷಯಗಳು ಹಾಗೂ ತಂತ್ರಾಂಶದಲ್ಲಿ Display ಆಗಿರುವ ಭಾಷೆ ಮತ್ತು ವಿಷಯಗಳು ಸರಿಯಾಗಿರುತ್ತದೆ ಎಂದು ಖಚಿತಪಡಿಸಿಕೊಂಡು, ಆಯಾ ಭಾಷೆ ಮತ್ತು ವಿಷಯಗಳಿಗೆ ಅನುಸಾರವಾಗಿ ಆಂತರಿಕ ಅಂಕಗಳನ್ನು ನಮೂದಿಸಿ Save ಮಾಡಬೇಕು.
5. ಪ್ರತಿ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ನಮೂದಿಸಿ Save ಮಾಡಿದ ನಂತರ Print ಸೌಲಭ್ಯ ನೀಡಲಾಗಿದೆ. ವಿದ್ಯಾರ್ಥಿವಾರು ವರದಿಯ ಪ್ರಿಂಟ್ ಪಡೆಯುವುದು ಕಡ್ಡಾಯ. ಪ್ರಿಂಟ್ ಪಡೆಯದಿದ್ದಲ್ಲಿ Freeze ಆಯ್ಕೆ ತೆರೆದುಕೊಳ್ಳುವುದಿಲ್ಲ. Print Out ತೆಗೆದುಕೊಂಡು ನಮೂದಿಸಿರುವ ಅಂಕಗಳು ಸರಿಯಿದೆಯೇ ಎಂದು ಪರಿಶೀಲಿಸಬೇಕು.
6. ಪ್ರತಿ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ನಮೂದಿಸಿ Freeze ಮಾಡುವುದಕ್ಕೂ ಮುಂಚೆ ವಿದ್ಯಾರ್ಥಿಯ ಆಂತರಿಕ ಅಂಕಗಳ ವರದಿಯ ಬಗ್ಗೆ ವಿದ್ಯಾರ್ಥಿಯ ಪೋಷಕರಿಗೆ ಮಾಹಿತಿ ನೀಡಿ ಪ್ರತಿ ಪೋಷಕರ ಸಹಿ ಪಡೆಯುವುದು ಕಡ್ಡಾಯ.
7. ಪ್ರತಿ ವಿದ್ಯಾರ್ಥಿಯ ಮಾಹಿತಿಯನ್ನು Print ತೆಗೆದು ಪರಿಶೀಲಿಸಿ ನಂತರ Freeze ಮಾಡಬೇಕು. **Freeze ಮಾಡಿದ ನಂತರ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**
8. ಭಾಷಾ ವಿಷಯಗಳಿಗೆ ವಿನಾಯಿತಿಯನ್ನು ಪಡೆದಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ, ವಿನಾಯಿತಿ ಪಡೆದ ವಿಷಯಗಳಿಗೆ ಆಂತರಿಕ ಅಂಕಗಳನ್ನು ನಮೂದಿಸುವ ಅಗತ್ಯವಿಲ್ಲ. ಈ ಆಯ್ಕೆಯನ್ನು ಸಹ ನೀಡಿರುವುದಿಲ್ಲ. ಕೆಲ ಪ್ರಕರಣಗಳಲ್ಲಿ ಪರ್ಯಾಯ ಕೋರ್ ವಿಷಯಗಳನ್ನು ಬರೆಯಲು ಅನುಮತಿ ನೀಡಲಾಗಿದ್ದು, ಈ ವಿಷಯಗಳಿಗೆ ಸಂಬಂಧಿಸಿದ ಆಂತರಿಕ ಅಂಕಗಳನ್ನು ನಮೂದಿಸಬೇಕಾಗಿದೆ.
9. ಆಯಾ ಶಾಲೆಯಲ್ಲಿ ಸೆಪ್ಟೆಂಬರ್ 2021ರ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ನೋಂದಾಯಿಸಿರುವ ಎಲ್ಲಾ CCERF ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ನಮೂದಿಸಿದ ನಂತರ ಶಾಲೆಯ ಕ್ರೋಢೀಕೃತ ವರದಿ (Consolidated Report) ಮುದ್ರಿಸಿಕೊಳ್ಳಬಹುದಾಗಿದೆ.
10. ಜೆ.ಟಿ.ಎಸ್ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನಮೂದಿಸುವ ಜೊತೆಯಲ್ಲೇ ಪ್ರಾಯೋಗಿಕ ಪರೀಕ್ಷೆಯ ಅಂಕಗಳನ್ನು ನಮೂದಿಸಲು ಅವಕಾಶ ನೀಡಲಾಗಿದ್ದು, ಸದರಿ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆ ನಡೆಯುವ ದಿನಾಂಕದಂದು, ಅಂದರೆ 30-09-2021ರಂದು ಈ ಶಾಲೆಗಳಿಗೆ ಪ್ರಾಯೋಗಿಕ ಪರೀಕ್ಷೆಯ ಅಂಕಗಳು ಮತ್ತು ಆಂತರಿಕ ಅಂಕಗಳನ್ನು ನಮೂದಿಸಲು ಅವಕಾಶ ಕಲ್ಪಿಸಲಾಗುವುದು.

ಆಯಾ ಶಾಲೆಯ ಮುಖ್ಯಸ್ಥರು ದಿನಾಂಕ: 24-09-2021 ರೊಳಗೆ ಸೆಪ್ಟೆಂಬರ್ 2021ರ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ನೋಂದಾಯಿಸಿರುವ ಎಲ್ಲಾ CCERF ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ನಮೂದಿಸಲು ಸೂಚಿಸಿದೆ. ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳ ಆಂತರಿಕ ಅಂಕಗಳನ್ನು ನಮೂದಿಸುವ ಕಾರ್ಯವನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಕ್ರಮವಹಿಸಲು ತಿಳಿಸಿದೆ.

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು

ಅಗತ್ಯ ಕ್ರಮಕ್ಕಾಗಿ :
1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗು ಮಾನ್ಯತೆ ಪಡೆದಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ ಶಾಲಾ ಲಾಗಿನ್ ಮುಖಾಂತರ